# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 151 | Pages. 2 | Date: 18-04-2025, FRIDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 151 - ಪುಟಗಳು : 2 - 18 ಏಪ್ರಿಲ್ 2025 ಶುಕ್ರವಾರ | Ph: 8762954248 | ದರ : ₹1


# ಪುರಸಭೆ ಅಧ್ಯಕ್ಷರ ವಿರುದ್ಧ ಸ್ವಪಕ್ಷೀಯರ ಪ್ರತಿಭಟನೆ

## ಮಾಜಿ ಸಚಿವ ಬಿ. ಶಿವರಾಂ ಭಾಗಿ ಅವ್ಯಾಹತ ಭ್ರಷ್ಟಾಚಾರದ ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪುರಸಭೆ ಅಧ್ಯಕ್ಷ ಎ.ಆರ್. ಅಶೋಕ್ ಅವರು ಶಾಸಕ ಹೆಚ್.ಕೆ. ಸುರೇಶ್ ಜೊತೆ ಶಾಮೀಲಾಗಿ ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿರುವುದಲ್ಲದೆ ಬಡವರಿಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಮಾಜಿ ಸಚಿವ ಬಿ. ಶಿವರಾಂ ನೇತೃತ್ವದಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.




ಪುರಸಭೆ ಅಧ್ಯಕ್ಷ ಎ.ಆರ್. ಅಶೋಕ್ ವಿರುದ್ಧ ಸ್ವ-ಪಕ್ಷೀಯರೇ ಬಹಿರಂಗ ಆಕ್ರೋಶ ವ್ಯಕ್ತಪಡಿಸಿರುವುದು ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿಯಿಲ್ಲ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ.

ಮಾಜಿ ಸಚಿವ ಬಿ. ಶಿವರಾಂ ಮಾತನಾಡಿ, ಪುರಸಭೆಯಲ್ಲಿ ಆಡಳಿತ ದುರ್ಬಲವಾಗಿದ್ದು, ಅಧ್ಯಕ್ಷರು ದುರಾಡಳಿತ ನಡೆಸುತ್ತಿರುವುದು ಖಂಡನೀಯ ಎಂದರು.

ಪುರಸಭೆಯಲ್ಲಿ ನಡೆಯುತ್ತಿರುವ ದೌರ್ಜನ್ಯ, ದಬ್ಬಾಳಿಕೆ ವಿರುದ್ಧ ಪಕ್ಷಾತೀತವಾಗಿ ಸಾಂಕೇತಿಕ ಪ್ರತಿಭಟನೆ ನಡೆಸಲಾಗಿದೆ. ಕಾನೂನು ಪ್ರಕಾರ ಖಾಸಗಿಯವರಿಗೆ ಸೇರಿದ ಹೆಚ್ಚುವರಿ ಆಗಿರುವ ಖಾತೆಯನ್ನು ಪುರಸಭೆ ಕೂಡಲೇ ರದ್ದು ಮಾಡಬೇಕು. ಈ ಖಾತೆ ಶಾಸಕರ ಪ್ರಭಾವದಿಂದಾಗಿ ಆಗಿದೆ. ಏಕೆಂದರೆ ಅವರು ಬಿಜೆಪಿಯವರು ಇದು ಎಲ್ಲರಿಗೂ ಗೊತ್ತಾಗಿದೆ. ಬಿಜೆಪಿ ವ್ಯಕ್ತಿಗಳ ಪ್ರಭಾವದಿಂದ ಜನ ಸಾಮಾನ್ಯರಿಗೆ ದೊರಕುವ ಸವಲತ್ತು ದೊರಕುತ್ತಿಲ್ಲ ಎಂದರು.

ಶಾಸಕರು ಪುರಸಭೆ ಮಳಿಗೆ ವಿಚಾರದಲ್ಲಿ ಜಿಲ್ಲಾಧಿಕಾರಿ, ಮುಖ್ಯಾಧಿಕಾರಿಗೆ ಪತ್ರ ಬರೆದು ಮಳಿಗೆ ಅವಶ್ಯವಿದ್ದವರಿಗೆ ಕೊಡಬೇಕು. ಅದಕ್ಕೆ ಕೆಲವು ಷರತ್ತು ವಿಧಿಸಿ ಎಂದು ಪತ್ರ ಬರೆಯುತ್ತಾರೆ. ಒಂದಕ್ಕೊಂದು ತಾಳೆ ಆಗುತ್ತಿಲ್ಲ ಎಂದರು.

ಒಬ್ಬೊಬ್ಬರ ಮಳಿಗೆ ವಿಚಾರದಲ್ಲಿ ಎಷ್ಟು ಕಲೆಕ್ಷನ್ ಆಗಿದೆ ಎಂದು ಎಲ್ಲರಿಗೂ ಗೊತ್ತಿರುವ ವಿಚಾರ. ಇವರು ಮಾಡಿರುವ ಅವ್ಯವಹಾರದ ದಾಖಲೆ ಜನರ ಬಳಿಯೇ ಇವೆ. ಇದಕ್ಕಿಂತ ಸಾಕ್ಷಿ ಬೇಕಾ..? ಎಂದ ಅವರು, ಇದಕ್ಕೆಲ್ಲಾ ಮೂಲ ಕಾರಣ ಸ್ಥಳೀಯ ಶಾಸಕರೇ ಆಗಿದ್ದು, ಈ ಬಗ್ಗೆ ಚರ್ಚೆ ನಡೆಯಬೇಕು. ಈಗಲಾದರೂ ಈ ಬಗ್ಗೆ ನಾವು ಧ್ವನಿ ಎತ್ತದಿದ್ದರೆ ಮುಂದೆ ಇವರ ಆಟವೇ ನಡೆಯುತ್ತದೆ. ನಾವು ಕೂಡಲೇ ಎಚ್ಚೆತ್ತು ಪ್ರತಿಭಟನೆ ಮಾಡಿ ಇಲ್ಲಿನ ಭ್ರಷ್ಟಾಚಾರಗಳನ್ನು ತಡೆಯಬೇಕಾಗಿದೆ. ಇಲ್ಲದೇ ಇದ್ದರೆ ಬೃಹತ್ ಮೆರವಣಿಗೆ ಮೂಲಕ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಬೇಲೂರು-ಹಳೇಬೀಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೈಯದ್ ತೌಫಿಕ್, ರಾಜ್ಯ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ಎಂ.ಆರ್ ವೆಂಕಟೇಶ್, ಪುರಸಭೆ ಸದಸ್ಯರಾದ ಶಾಂತಕುಮಾರ್, ದಾನಿ, ಭರತ್, ಪ್ರಸನ್ನ, ರತ್ನ ಸತ್ಯನಾರಾಯಣ್, ಕೆಡಿಪಿ ಸದಸ್ಯ ಬಿಕ್ಕೋಡು ಚೇತನ್ ಸಿ.ಗೌಡ ಇತರರಿದ್ದರು.

### ದಬ್ಬಾಳಿಕೆಯಿಂದ ಮನೆ ಧ್ವಂಸ ಆರೋಪ

ಹನುಮಂತ ನಗರದ ಮನೆಯೊಂದನ್ನು ಮಾಲೀಕರ ಗಮನಕ್ಕೆ ತಾರದೆ ಒತ್ತುವರಿ ನೆಪದಲ್ಲಿ ಧ್ವಂಸ ಮಾಡಿದ್ದಾರೆ. ಅಲ್ಲಿ ರಸ್ತೆ ದಾರಿ ಇತ್ತು ಎಂದು ಯಾವುದೇ ನೋಟಿಸ್ ನೀಡದೆ, ಸರ್ವೆ ಮಾಡದೆ ಸರ್ವಾಧಿಕಾರಿ ಧೋರಣೆ ಪ್ರದರ್ಶಿಸಲಾಗಿದೆ. ಈಗ ಕುಟುಂಬಸ್ಥರಿಗೆ ವಾಸಿಸಲು ಮನೆಯಿಲ್ಲದೆ ನಿರ್ಗತಿಕರಾಗಿದ್ದಾರೆ. ಇದು ಕಾನೂನು ಬಾಹಿರ ಚಟುವಟಿಕೆ ಎಂದು ಬಿ. ಶಿವರಾಂ ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆಲ್ಲಾ ಸ್ಥಳೀಯ ಶಾಸಕರ ಕುಮ್ಮಕ್ಕೇ ಕಾರಣ. ಬಡವರ ಮನೆ ಒಡೆದು ದೌರ್ಜನ್ಯ ಮಾಡಿದ್ದಾರೆ. ವಾಸಿಸುವ ಜನರಿಗೆ ರಕ್ಷಣೆ ಇಲ್ಲ, ಇದೇ ರೀತಿ ದೌರ್ಜನ್ಯ ನಡೆದರೆ ಅರಾಜಕತೆ ಮನೆ ಮಾಡಲಿದೆ. ಕೂಡಲೇ ತಹಸೀಲ್ದಾರ್ ಸರ್ವೆ ನಡೆಸಿ ಜಾಗ ಯಾರಿಗೆ ಸೇರಿದೆ ಎಂದು ಗುರುತು ಮಾಡಿ ಕೂಡಲೇ ಕ್ರಮ ಕೈಗೊಳ್ಳಬೇಕು, ಇಲ್ಲದಿದ್ದರೆ ತಾಲ್ಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

### ಕಾಂಗ್ರೆಸ್ ಕಚ್ಚಾಟ ಬಯಲಿಗೆ

ಬೇಲೂರು ಪುರಸಭೆ ಅಧ್ಯಕ್ಷ ಎ.ಆರ್. ಅಶೋಕ್ ಹಾಗೂ ಮಾಜಿ ಸಚಿವ ಬಿ. ಶಿವರಾಂ ಅವರ ಮುಸುಕಿನ ಗುದ್ದಾಟ ಈಗ ಬಯಲಾಗಿದೆ. ಅಶೋಕ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಾಗಿನಿಂದಲೂ ಸ್ವಪಕ್ಷೀಯರ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಲೇ ಇದ್ದಾರೆ. ಏ. 14 ರಂದು ಕಾಂಗ್ರೆಸ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಅಂಬೇಡ್ಕರ್ ಜಯಂತಿಯಲ್ಲಿ ಸಹ ಅವರು ಸ್ವಪಕ್ಷೀಯರ ಅಸಹಕಾರ ನೆನೆದು ಕಣ್ಣೀರು ಸುರಿಸಿದ್ದರು. ಈ ವಿಚಾರ ಹೈಕಮಾಂಡ್ ಗಮನಕ್ಕೆ ಬಂದಿದ್ದು ಯಾವ ತೀರ್ಮಾನ ಕೈಗೊಳ್ಳುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

## ಕೇಂದ್ರದ ವಿರುದ್ಧ ಎತ್ತಿನ ಗಾಡಿ ಮೆರವಣಿಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಗತ್ಯ ವಸ್ತುಗಳ ಬೆಲೆ ಏರಿಕೆ ಮೂಲಕ ಕೇಂದ್ರ ಸರ್ಕಾರ ಬಡವರ ಜೇಬಿಗೆ ಕತ್ತರಿ ಹಾಕುತ್ತಿದೆ ಎಂದು ಆರೋಪಿಸಿ ಗುರುವಾರ ಜಿಲ್ಲಾ ಯೂತ್ ಕಾಂಗ್ರೆಸ್ ಘಟಕದಿಂದ ಎತ್ತಿನಗಾಡಿ ಮೆರವಣಿಗೆ ಮೂಲಕ ವಿನೂತನ ಪ್ರತಿಭಟನೆ ನಡೆಸಲಾಯಿತು.




ನಗರದ ತಣ್ಣೀರುಹಳ್ಳ ವೃತ್ತದಿಂದ ಆದಾಯ ತೆರಿಗೆ ಕಚೇರಿ ವರೆಗೆ ಬಂದ ಪ್ರತಿಭಟನಾಕಾರರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಧಿಕ್ಕಾರ ಕೂಗಿದರು.

ಕಳೆದ 11 ವರ್ಷದಲ್ಲಿ ಕೇಂದ್ರ ಸರ್ಕಾರ 148 ದಿನಬಳಕೆ ವಸ್ತುಗಳ ಬೆಲೆ ಏರಿಕೆ ಮಾಡಿದೆ. ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಎಂಬ ಘೋಷವಾಕ್ಯದೊಂದಿಗೆ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಬಡವರ ರಕ್ತ ಹೀರುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮನ್‌ಮೋಹನ್ ಸಿಂಗ್ ಅವರ ಆಡಳಿತಾವಧಿಯಲ್ಲಿ 450 ರೂ.ಗೆ ಸಿಗುತ್ತಿದ್ದ ಸಿಲಿಂಡರ್ ಈಗ 950 ರೂ. ದಾಟಿದೆ.

ಸಿಮೆಂಟ್ ಬೆಲೆ 250 ರಿಂದ 450 ರೂ., ರೈಲ್ವೆ ಪ್ಲಾಟ್ ಫಾರಮ್ ಟಿಕೆಟ್ ದರವನ್ನು 5 ರಿಂದ 50 ರೂ.ಗೆ ಹೆಚ್ಚಿಸಿದ್ದಾರೆ ಎಂದು ಆರೋಪಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಅವೈಜ್ಞಾನಿಕ ನಿರ್ಧಾರಗಳು ದೇಶದ ಅಭಿವೃದ್ಧಿಗೆ ಮಾರಕವಾಗಿದೆ. ನೋಟು ರದ್ದತಿ ಮೂಲಕ ಆರ್ಥಿಕ ವ್ಯವಸ್ಥೆಯನ್ನು ಹಳಿ ತಪ್ಪಿಸಿದ್ದಾರೆ.

ಜನರಿಗೆ ಸುಳ್ಳು ಹೇಳಿ ಚುನಾವಣೆ ಗೆಲ್ಲುತ್ತಿರುವ ಮೋದಿ ಅವರಿಗೆ ದೇಶದ ಅಭಿವೃದ್ಧಿಯ ಕಾಳಜಿ ಇಲ್ಲ ಎಂದು ಕಿಡಿಕಾರಿದರು.

ಜಿಲ್ಲಾ ಯೂತ್ ಕಾಂಗ್ರೆಸ್ ಉಪಾಧ್ಯಕ್ಷ ರಂಗಸ್ವಾಮಿ, ಜಿ.ಇ. ಪುನೀತ್, ಪದಾಧಿಕಾರಿಗಳಾದ ಸಮೀರ್ ಪಾಷಾ, ಹೆಚ್.ಎನ್. ಶರತ್, ರವಿಕಿರಣ್ ಮತ್ತಿತರರಿದ್ದರು.

## ಗ್ಯಾರಂಟಿಗಳಿಂದ ಅಭಿವೃದ್ಧಿ ಕುಂಠಿತ: ಬಾಲಕೃಷ್ಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಆದ್ಯತೆ ನೀಡುತ್ತಿರುವುದರಿಂದ ಅಭಿವೃದ್ಧಿ ಕಾಮಗಾರಿಗಳು ಕುಂಠಿತವಾಗುತ್ತಿವೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಆರೋಪಿಸಿದರು.



ಹೋಬಳಿಯ ಜಂಬೂರು ಗ್ರಾಮದಲ್ಲಿ ನೀರಾವರಿ ಇಲಾಖೆಯಿಂದ ಕೈಗೊಂಡಿರುವ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಕಳೆದ 2 ವರ್ಷಗಳಿಂದ ಅನುದಾನವಿಲ್ಲದೆ ತಾಲ್ಲೂಕಿನಲ್ಲಿ ಅಭಿವೃದ್ಧಿ ಕೆಲಸಗಳು ಕುಂಠಿತವಾಗಿವೆ. ತಾಲ್ಲೂಕಿನ ಅಭಿವೃದ್ಧಿಗೆ ಹಿನ್ನೆಡೆಯಾಗಿದೆ. ಸರ್ಕಾರ ಮುಂಬರುವ ದಿನಗಳಲ್ಲಾದರೂ ಕ್ಷೇತ್ರದ ಅಭಿವೃದ್ಧಿಗೆ 100 ಕೋಟಿ ರೂ. ನೀಡಬೇಕು ಎಂದು ಒತ್ತಾಯಿಸಿದರು.

ತಾಲ್ಲೂಕಿನ ಜಂಬೂರು ಗ್ರಾಮದಿಂದ ಮಾದಿಹಳ್ಳಿಗೆ ಸಂಪರ್ಕಿಸುವ 1 ಕಿ.ಮೀ. ರಸ್ತೆಯನ್ನು 60 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಅನೇಕ ವರ್ಷಗಳಿಂದ ಮಾದಿಹಳ್ಳಿ ಗ್ರಾಮಸ್ಥರು ರಸ್ತೆ ಅಭಿವೃದ್ಧಿಪಡಿಸುವಂತೆ ಮನವಿ ಮಾಡಿದ್ದರು.

ನಾಲ್ಕು ವರ್ಷಗಳ ಹಿಂದೆಯೇ ನೀರಾವರಿ ಇಲಾಖೆಯಿಂದ ರಸ್ತೆ ಕಾಮಗಾರಿಗೆ ಟೆಂಡರ್ ನಡೆಸಲಾಯಿತು. ಕೆಲ ಸಮಸ್ಯೆಯಿಂದ ವಿಳಂಬವಾಗಿತ್ತು. ಈಗ 60 ಲಕ್ಷ ರೂ. ಅನುದಾನ ಬಿಡುಗಡೆಯಾಗಿದ್ದು ಸುಸಜ್ಜಿತ ರಸ್ತೆ ನಿರ್ಮಾಣವಾಗಲಿದೆ ಎಂದು ಹೇಳಿದರು.

ಜಂಬೂರು ಗ್ರಾಮದಲ್ಲಿ ಸಾರ್ವಜನಿಕ ಸಮುದಾಯ ಭವನ ನಿರ್ಮಾಣಕ್ಕೆ 50 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗಿದೆ.

ಜೊತೆಗೆ ಗ್ರಾಮದ ಸೋಮೇಶ್ವರ ದೇವಾಲಯ ಜೀರ್ಣೋದ್ಧಾರಕ್ಕೆ 5 ಲಕ್ಷ ರೂ., ಮುಖ್ಯರಸ್ತೆ ಅಭಿವೃದ್ಧಿ ಮತ್ತು ಗ್ರಾಮದಲ್ಲಿ ಆಧುನಿಕ ವಿದ್ಯುತ್ ಲೈನ್ ನವೀಕರಣಕ್ಕೆ ಅನುದಾನ ಒದಗಿಸಲಾಗಿದೆ.

ಜಂಬೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ತೆಂಕನಹಳ್ಳಿ ಗೇಟ್‌ನಲ್ಲಿ ಹೈ ಮಾಸ್ಟ್ ವಿದ್ಯುತ್ ದೀಪ ವ್ಯವಸ್ಥೆ ಕಲ್ಪಿಸಲಾಗುವುದು.

ಜಂಬೂರು ಗ್ರಾಮದಿಂದ ಅವೇರಹಳ್ಳಿಗೆ ಸಂಪರ್ಕಿಸುವ ರಸ್ತೆ ಹಾಗೂ ತೆಂಕನಹಳ್ಳಿ ಗೇಟ್‌ನಿಂದ ಮಂಚೇನಹಳ್ಳಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿಪಡಿಸಲು ಅನುದಾನ ಬಿಡುಗಡೆ ಮಾಡಿಸುವುದಾಗಿ ಭರವಸೆ ನೀಡಿದರು.

ನುಗ್ಗೇಹಳ್ಳಿ ಏತ ನೀರಾವರಿ ಯೋಜನೆ ಮೂಲಕ ಗ್ರಾಮದ ಕೆರೆಯನ್ನು 5 ವರ್ಷಗಳಿಂದ ತುಂಬಿಸಲಾಗುತ್ತಿದೆ. ಅದರಿಂದ ಭಾಗದ ರೈತರಿಗೆ ಹೆಚ್ಚು ಅನುಕೂಲವಾಗಿದೆ ಎಂದರು.

ಜೆಡಿಎಸ್‌ನ ನಕ್ಷತ್ರ ಬಾಲಕೃಷ್ಣ, ನುಗ್ಗೇಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಅಧ್ಯಕ್ಷ ಹುಲಿಕೆರೆ ಸಂಪತ್ ಕುಮಾರ್, ಗುತ್ತಿಗೆದಾರ ಬಾಗೂರು ಹರೀಶ್, ಮುಖಂಡರಾದ ಜೆ.ಸಿ. ಕುಮಾರ್, ಶಂಕರ್, ಅಣ್ಣಯ್ಯ, ಜೆ.ಎನ್. ಮಹೇಶ್, ಜಯರಾಮ್, ಪವಿತ್ರ, ಅಪ್ಪಾಜಿ, ಧರಣಿ ಕುಮಾರ್, ಮಂಜು, ರಮೇಶ್, ಅಡಗೂರು ಲೋಹಿತ್, ಶೃತಿ ಮಹೇಶ್, ಅರ್ಚಕ ಸೋಮು, ನಂಜುಂಡಿ , ಗ್ರಾಮ ಪಂಚಾಯಿತಿ ಸದಸ್ಯರಾದ ಹೊನ್ನೇಗೌಡ, ನಟರಾಜ್ ಇತರರಿದ್ದರು.

## ಅಂಗವಿಕಲರಿಗೆ ಅನುಕಂಪ ಬೇಡ ಅವಕಾಶ ಕೊಡಿ



ಹಾಸನ: ಅಂಗವಿಕಲರನ್ನು ಶಾಪಗ್ರಸ್ತರಂತೆ ನೋಡದೆ ಅವರಿಗೆ ಅನುಕಂಪದ ಬದಲು ಅವಕಾಶ ಕಲ್ಪಿಸಿದರೆ ಎಲ್ಲರಂತೆ ಬದುಕು ಕಟ್ಟಿಕೊಳ್ಳುತ್ತಾರೆ ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ಹೇಳಿದರು.

ನಗರದ ಸಾಲಗಾಮೆ ರಸ್ತೆಯಲ್ಲಿರುವ ಭಾರತೀಯ ರೆಡ್ ಕ್ರಾಸ್ ಕಚೇರಿಯಲ್ಲಿ ಗುರುವಾರ ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಶ್ರವಣದೋಷವುಳ್ಳ ಬಾಲಕ-ಬಾಲಕಿಯರಿಗೆ ಉಚಿತ ಶ್ರವಣ ಸಾಧನ ವಿತರಿಸಿ ಬಳಿಕ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ತಮ್ಮ ತಂದೆ-ತಾಯಿ ತಮಗಾಗಿ ಏನೂ ಆಸ್ತಿ ಮಾಡಿಲ್ಲ ಎಂಬ ದೂರುಗಳು ನ್ಯಾಯಾಲಯಗಳ ಮೆಟ್ಟಿಲೇರಿರುವುದನ್ನು ಕಾಣಬಹುದು, ಆದರೆ ಜನ್ಮ ನೀಡಿ ಉತ್ತಮ ಶಿಕ್ಷಣ ಆರೋಗ್ಯ ಕಲ್ಪಿಸಿದರೆ ಅದಕ್ಕಿಂತ ಹೆಚ್ಚಿನ ನಿರೀಕ್ಷೆ ಇಟ್ಟುಕೊಳ್ಳಬಾರದು ಎಂದರು.

ದೇಹದಲ್ಲಿ ತಮಗೆ ಕೊರತೆ ಇರುವ ಅಂಗಗಳ ಬಗ್ಗೆ ಲೆಕ್ಕಿಸಬಾರದು. ತಮಗೆ ಇರುವ ಅಂಗಗಳನ್ನೇ ಬಳಸಿಕೊಂಡು ಸಾಧನೆಯ ಶಿಖರದತ್ತ ತಮ್ಮ ಗುರಿ ಇರಬೇಕು. ಹಾಗಿದ್ದಾಗ ಪ್ರತಿಯೊಬ್ಬರೂ ಏನನ್ನಾದರೂ ಸಾಧಿಸಲು ಸಾಧ್ಯ. ಈ ನಿಟ್ಟಿನಲ್ಲಿ ಎಲ್ಲರೂ ಯೋಚಿಸಿ ಗುರಿ ಮುಟ್ಟುವ ನಿಟ್ಟಿನಲ್ಲಿ ಮುಂದಾಗಬೇಕು ಎಂದು ಕರೆ ನೀಡಿದರು.

ಹಾಸನದ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಹಲವು ಜನಪರ ಕಾರ್ಯಕ್ರಮ ಮಾಡಿಕೊಂಡು ಬಂದಿದೆ. ಈ ನಿಟ್ಟಿನಲ್ಲಿ ಶ್ರವಣದೋಷವುಳ್ಳ ಮಕ್ಕಳಿಗೆ ಶ್ರವಣ ಸಾಧನ ವಿತರಣೆ ಮಾಡುತ್ತಿರುವುದು ಶ್ಲಾಘನೀಯ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಇಂತಹ ಕಾರ್ಯಕ್ರಮ ನಡೆಯುವಂತಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಜಿಲ್ಲಾ ಸಭಾಪತಿ ಎಚ್.ಪಿ ಮೋಹನ್, ಉಪ ಸಭಾಪತಿ ಡಾ.ವೈಎಸ್ ವೀರಭದ್ರಪ್ಪ, ಶ್ರವಣ ಶಾಸ್ತ್ರ ತಜ್ಞರಾದ ಶೃತಿ, ನಿರ್ದೇಶಕರಾದ ಎಸ್.ಎಸ್ ಪಾಷ, ಬಿ.ಆರ್. ಉದಯ್ ಕುಮಾರ್, ಕೆ.ಟಿ ಜಯಶ್ರೀ, ಸುರೇಶ್, ಶಬೀರ್ ಅಹ್ಮದ್, ಜಯೇಂದ್ರ ಕುಮಾರ್ ಇತರರಿದ್ದರು.

## ಹಿಮೋಫಿಲಿಯ ಕಾಯಿಲೆ ಬಗ್ಗೆ ಎಚ್ಚರ ಅಗತ್ಯ

ಹಾಸನ: ವೈದ್ಯರ ಸಲಹೆ ಸೂಚನೆಯನ್ನು ಪಾಲಿಸುವುದರಿಂದ ಹಿಮೋಫಿಲಿಯ ರೋಗವನ್ನು ತಡೆಗಟ್ಟಬಹುದು ಎಂದು ಪತ್ರಕರ್ತ ರವಿ ನಾಕಲಗೂಡು ತಿಳಿಸಿದರು.

ನಗರದ ಭಾರತೀಯ ಶಿಶು ವೈದ್ಯಕೀಯ ಸಂಘದ ಆವರಣದಲ್ಲಿ ಗುರುವಾರ ತವರು ಚಾರಿಟೇಬಲ್ ಟ್ರಸ್ಟ್ ಮತ್ತು ಇಂಟಾಸ್ ಫೌಂಡೇಶನ್, ಹಿಮೋಫಿಲಿಯಾ ಸೊಸೈಟಿ, ಭಾರತೀಯ ಶಿಶು ವೈದ್ಯಕೀಯ ಸಂಘದಿಂದ ಹಮ್ಮಿಕೊಂಡಿದ್ದ ವಿಶ್ವ ಹಿಮೋಫಿಲಿಯ ದಿನಾಚರಣೆಯಲ್ಲಿ ಮಾತನಾಡಿದರು.




ಇತ್ತೀಚಿನ ದಿನಗಳಲ್ಲಿ ಹಿಮೋಫಿಲಿಯ ರೋಗವು ಸಾಕಷ್ಟು ಹರಡುತ್ತಿದ್ದು ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಎಲ್ಲರ ಸಹಕಾರ ಅತ್ಯಗತ್ಯವಾಗಿದೆ. ಪ್ರತಿಯೊಬ್ಬರು ಕೂಡ ರೋಗದ ಬಗ್ಗೆ ಸಾಕಷ್ಟು ಜಾಗರೂಕತೆ ವಹಿಸಬೇಕು. ತಪ್ಪದೆ ತಜ್ಞ ವೈದ್ಯರನ್ನ ಭೇಟಿ ಮಾಡಿ ಪರೀಕ್ಷೆ ನಡೆಸುವ ಮೂಲಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮುಂದಾಗಬೇಕು. ಇಂತಹ ರೋಗಗಳ ಬಗ್ಗೆ ಸಾರ್ವಜನಿಕರಿಗೆ ಸಾಕಷ್ಟು ಅರಿವು ಮೂಡಿಸಬೇಕು ಎಂದರು.

ಮಕ್ಕಳ ತಜ್ಞ ಡಾ. ಬಿ.ದಿನೇಶ್ ಮಾತನಾಡಿ, ಹಿಮೋಫಿಲಿಯ ಒಂದು ಆನುವಂಶಿಕ ರಕ್ತಸ್ರಾವದ ಕಾಯಿಲೆ. ಪೋಷಕರಿಂದ ಅವರ ಮಕ್ಕಳಿಗೆ ಹರಡಬಹುದು. ಹಿಮೋಫಿಲಿಯ ಇದ್ದರೆ ರಕ್ತ ಸರಿಯಾಗಿ ಹೆಪ್ಪುಗಟ್ಟುವುದಿಲ್ಲ. ಇದು ರಕ್ತಸ್ರಾವಕ್ಕೆ ಕಾರಣವಾಗಬಹುದು, ನಿಯಂತ್ರಿಸಲು ಕಷ್ಟವಾಗುತ್ತದೆ ಎಂದರು.

ಇಂಟಾಸ್ ಫೌಂಡೇಶನ್ ನಾರಾಯಣಮೂರ್ತಿ, ಆಕಾಂಕ್ಷಾ, ಹಿಮೋಫಿಲಿಯಾ ಸೊಸೈಟಿಯ ಅಧ್ಯಕ್ಷ ಕೆ. ಹರೀಶ್, ಕಾರ್ಯದರ್ಶಿ ಡಾ. ಪಾಲಾಕ್ಷ ಇತರರಿದ್ದರು.

## ಏ. 21ಕ್ಕೆ ಅಸಮತೋಲನ ನಿವಾರಣೆ ಸಭೆ

ಹಾಸನ: ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಸದಸ್ಯ ಎಂ.ಹೆಚ್. ಸೂರ್ಯನಾಯಣ ಹಾಗೂ ಸಂಶೋಧನಾ ಸಹಾಯಕ ಆರ್.ಎಸ್. ಭರತ್ ಕಾಂತ್ ಏ. 21 ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಸಂವಾದ ಸಭೆ ನಡೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಮಹಾನಟಿ ಸೀಸನ್ 2ಗೆ ಹಾಸನದಲ್ಲಿ ಆಡಿಷನ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಕನ್ನಡದ ಜನಪ್ರಿಯ ವಾಹಿನಿ ಜೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ಮಹಾನಟಿ ಸೀಸನ್ 2ಗೆ ರಾಜ್ಯಾದ್ಯಂತ ಆಡಿಷನ್ ನಡೆಯುತ್ತಿದ್ದು ಏ. 20ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ಕೆ.ಆರ್. ಪುರಂನ ಎಸ್ ಆರ್‌ಎಸ್ ಪ್ರಜ್ಞಾ ಶಾಲೆಯಲ್ಲಿ ಕಲಾವಿದರ ಆಯ್ಕೆ ಪ್ರಕ್ರಿಯೆ ಹಮ್ಮಿಕೊಳ್ಳಲಾಗಿದೆ.




ನಟಿಯಾಗುವ ನಿಮ್ಮ ಕನಸನ್ನು ನನಸಾಗಿಸಲು ಬರುತ್ತಿದೆ ಮಹಾನಟಿ ಸೀಸನ್ 2. ಮನಗೆಲ್ಲುವ ಧಾರಾವಾಹಿಗಳು, ಸೂಪರ್ ಹಿಟ್ ವರ್ಲ್ಡ್ ಟೆಲಿವಿಷನ್ ಪ್ರೀಮಿಯರ್‌ಗಳು ಮತ್ತು ಮನರಂಜಿಸುವ ರಿಯಾಲಿಟಿ ಶೋ ಗಳ ಮೂಲಕ ಕನ್ನಡಿಗರ ಹೃದಯ ಗೆದ್ದು ನಂಬರ್ 1 ಸ್ಥಾನವನ್ನು ಕಾಯ್ದಿರಿಸಿಕೊಂಡಿರುವ ಜೀ ಕನ್ನಡ ಈಗ ಮತ್ತೊಂದು ಸಾಹಸಕ್ಕೆ ಕೈ ಹಾಕಿದೆ.

ಜನಪ್ರಿಯ ರಿಯಾಲಿಟಿ ಶೋಗಳಾದ ಡ್ರಾಮಾ ಜೂನಿಯರ್ಸ್, ಕಾಮಿಡಿ ಕಿಲಾಡಿಗಳು, ಡಾನ್ಸ್ ಕರ್ನಾಟಕ ಡಾನ್ಸ್, ಸರಿಗಮಪ, ಮಹಾನಟಿ ಸೀಸನ್-1 ಮೂಲಕ ಈಗಾಗಲೇ ಸಾಕಷ್ಟು ನಟ ನಟಿಯರು, ಗಾಯಕ ಗಾಯಕಿಯರು ಹಾಗೂ ಕೊರಿಯೋಗ್ರಾಫರ್‌ಗಳನ್ನ ಕರುನಾಡಿಗೆ ಕೊಟ್ಟಿರುವ ಜೀ ಕನ್ನಡ ವಾಹಿನಿ ಇದೀಗ ಮಹಾನಟಿ ಸೀಸನ್ 2 ಕೈಗೆತ್ತಿಕೊಂಡಿದೆ.

ಮಹಾನಟಿ ಸೀಸನ್ 1 ಈಗಾಗಲೇ ಯಶಸ್ವಿಯಾಗಿದ್ದು, ವಿಜೇತರಾದ ಪ್ರಿಯಾಂಕಾ ಆಚಾರ್ ಬೆಳ್ಳಿತೆರೆಯಲ್ಲಿ ತನ್ನ ಚೊಚ್ಚಲ ನಟನೆಯನ್ನು ಆರಂಭಿಸಿದ್ದಾರೆ. ತೀರ್ಪುಗಾರರಾದ ತರುಣ್ ಸುಧೀರ್ ಹಾಗೂ ಮಹಾನಟಿ ಪ್ರೇಮ ಅವರ ನಟನೆಯ ಪಾಠಗಳು, ಮನೋಜ್ಞ ನಟಿ ನಿಶ್ವಿಕ ಅವರ ಸ್ಫೂರ್ತಿ ಮಾತುಗಳು, ಮಾಸ್ಟರ್ ಮೈಂಡ್ ಎಂದೇ ಖ್ಯಾತರಾದ ರಮೇಶ್ ಅರವಿಂದ್ ಅವರು ಈ ಶೋನ ಪ್ರಮುಖರಾಗಿದ್ದಾರೆ.

ಮಹಾನಟಿ ಸೀಸನ್ 2 ಆಡಿಷನ್‌ಗೆ 18 ರಿಂದ 28 ವರ್ಷದ ಒಳಗಿನ ಕಲಾಸಕ್ತ ಯುವತಿಯರು ಈ ಆಡಿಷನ್‌ನಲ್ಲಿ ಭಾಗವಹಿಸಬಹುದಾಗಿದೆ. ಆಡಿಷನ್‌ನಲ್ಲಿ ಭಾಗವಹಿಸಲು ಬರುವಾಗ ನಿಮ್ಮ ಪಾಸ್‌ಪೋರ್ಟ್ ಅಳತೆಯ ಫೋಟೋ ಮತ್ತು ವಿಳಾಸ ದಾಖಲಾತಿ ತರಬೇಕು ಎಂದು ಪ್ರಕಟಣೆ ತಿಳಿಸಿದೆ.

## ಪ್ರತ್ಯೇಕ ಅಪಘಾತ: ಮೂವರ ದುರ್ಮರಣ

ಹಾಸನ: ಜಿಲ್ಲೆಯ ವಿವಿಧೆಡೆ ಬುಧವಾರ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಮೂವರು ಮೃತಪಟ್ಟು ನಾಲ್ವರು ಗಂಭೀರ ಗಾಯಗೊಂಡಿದ್ದಾರೆ.

ಹಾಸನ-ತಿಪಟೂರು ರಸ್ತೆಯ ಹೆಗ್ಗಟ್ಟ ಗೇಟ್ ಹತ್ತಿರ ಎದುರುಗಡೆಯಿಂದ ಬಂದ ಬೈಕ್ ಡಿಕ್ಕಿಯಾದ ಪರಿಣಾಮ ಅರಸೀಕೆರೆ ತಾಲ್ಲೂಕು ಬಾಗಿವಾಳು ಗ್ರಾಮದ ತಿಮ್ಮೇಗೌಡ (53) ಮೃತಪಟ್ಟಿದ್ದಾರೆ. ಸ್ನೇಹಿತ ಸಣ್ಣಯ್ಯ ಅವರೊಂದಿಗೆ ಕೊಂಡೆನಾಳು ಜಾತ್ರೆಗೆ ತೆರಳಿದ್ದ ಅವರು ವಾಪಸ್ ಬರುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಬೈಕ್ ಡಿಕ್ಕಿಯಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸಣ್ಣಯ್ಯ ಅವರಿಗೂ ಗಂಭೀರ ಗಾಯಗಳಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಕಾರು ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಆಲೂರು ತಾಲ್ಲೂಕಿನ ಭರತವಳ್ಳಿ ಸಮೀಪ ನಡೆದಿದೆ. ನಾಕಲಗೂಡು ಕೊಪ್ಪಲು ಗ್ರಾಮದ ಜಯಣ್ಣ (58) ಮೃತರು. ಕುಂಬಾರಹಳ್ಳಿ ಗ್ರಾಮದ ಸ್ನೇಹಿತ ಧರ್ಮಪ್ಪ ಅವರೊಂದಿಗೆ ಬೈಕ್‌ನಲ್ಲಿ ಹಾಸನಕ್ಕೆ ಬರುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ಗಂಭೀರ ಗಾಯಗೊಂಡಿದ್ದ ಇಬ್ಬರನ್ನೂ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಜಯಣ್ಣ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಜಯಣ್ಣ ಅವರು ಹಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರ ಹೊರ ವಲಯದ ಎಂಸಿಎಫ್ ಮುಂಭಾಗ ಬೈಕ್ ನಿಯಂತ್ರಣ ತಪ್ಪಿ ಕೆಳಗೆ ಬಿದ್ದ ಪರಿಣಾಮ ಯುವಕ ಮೃತಪಟ್ಟು ಮತ್ತಿಬ್ಬರಿಗೆ ಗಾಯಗಳಾಗಿವೆ. ಆಂಧ್ರಪ್ರದೇಶ ಮೂಲದ ಮಂಜುನಾಥ್ (28) ಮೃತರು. ದಾಸರಕೊಪ್ಪಲಿನಲ್ಲಿರುವ ಅಮ್ಮ ಪೇಸ್ಟ್ರಿಸ್ ಬೇಕರಿಯಲ್ಲಿ ಕೆಲಸ ಮಾಡಿಕೊಂಡಿದ್ದ ಮಂಜುನಾಥ್ ಹಳೇಬೀಡಿನ ಸ್ನೇಹಿತನ ಮನೆಗೆ ಊಟಕ್ಕೆಂದು ಸ್ನೇಹಿತರೊಂದಿಗೆ ತೆರಳಿದ್ದ. ಬುಧವಾರ ರಾತ್ರಿ 12.30ರ ಸಮಯದಲ್ಲಿ ಬರುತ್ತಿದ್ದಾಗ ಹಂಪ್ಸ್ ಅನ್ನು ಜೋರಾಗಿ ಹತ್ತಿಸಿದ್ದರಿಂದ ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದಾರೆ. ಜೊತೆಗಿದ್ದ ಭೈರವಕುಮಾರ್ ಹಾಗು ಗೌತಮ್ ಎಂಬುವರಿಗೆ ಗಾಯಗಳಾಗಿವೆ. ಮಂಜುನಾಥ್‌ಗೆ ಹಿಮ್ಸ್‌ನಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾನೆ. ಹಾಸನ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನಮ್ಮ ಇತಿಹಾಸ, ಸಂಸ್ಕೃತಿಯ ಸಂರಕ್ಷಣೆಗೆ ಒಗ್ಗಟ್ಟಿನ ಹೆಜ್ಜೆ




ಪ್ರತಿ ವರ್ಷ ಏಪ್ರಿಲ್ 18ರಂದು ಜಾಗತಿಕ ಮಟ್ಟದಲ್ಲಿ ವಿಶ್ವ ಪರಂಪರೆ ದಿನವನ್ನು ಆಚರಿಸಲಾಗುತ್ತದೆ. ಇದನ್ನು ಅಂತರರಾಷ್ಟ್ರೀಯ ಸ್ಮಾರಕಗಳು ಮತ್ತು ತಾಣಗಳ ದಿನ ಎಂದು ಕರೆಯಲಾಗುತ್ತದೆ. 1982 ರಲ್ಲಿ ಇಂಟರ್‌ನ್ಯಾಷನಲ್ ಕೌನ್ಸಿಲ್ ಆನ್ ಮಾನ್ಯುಮೆಂಟ್ಸ್ ಅಂಡ್ ಸೈಟ್ಸ್ (ICOMOS) ಈ ದಿನವನ್ನು ಪ್ರಸ್ತಾವಿಸಿ, ನಂತರ ಯುನೆಸ್ಕೊ ಮಾನ್ಯತೆ ದೊರೆತಿದೆ. ಇದರ ಉದ್ದೇಶ ಒಂದು ಸ್ಪಷ್ಟವಾದ ಸಂದೇಶ. ನಮ್ಮ ಸಾಂಸ್ಕೃತಿಕ ಹಾಗೂ ನೈಸರ್ಗಿಕ ಪರಂಪರೆಯನ್ನು ಸಂರಕ್ಷಿಸುವ ಜವಾಬ್ದಾರಿ ಎಲ್ಲರದು.

## ಪರಂಪರೆಯ ಪಾಠ

ವಿಶ್ವ ಪರಂಪರೆ ಸ್ಥಳಗಳು ಕೇವಲ ಹಳೆಯ ಕಟ್ಟಡಗಳು ಅಥವಾ ಪ್ರಕೃತಿ ಸಂಪತ್ತುಗಳಷ್ಟೇ ಅಲ್ಲ. ಅವುಗಳು ಮಾನವ ಇತಿಹಾಸದ ಜೀವಂತ ಸಾಕ್ಷಿಗಳು. ಗೀಜಾದ ಪಿರಮಿಡ್‌ಗಳು, ಚೀನಾದ ಗ್ರೇಟ್ ವಾಲ್, ತಾಜ್‌ಮಹಲ್, ಹಂಪಿಯ ಶಿಲಾ ವೈಭವ. ಇವು ಎಲ್ಲವೂ ನಮ್ಮ ಹಿಂದಿನ ಪೀಳಿಗೆಗಳ ಕಲಾ-ಸಾಂಸ್ಕೃತಿಕ ವೈಭೋಗವನ್ನು ಪ್ರತಿಬಿಂಬಿಸುತ್ತವೆ. ಇಂತಹ ಸ್ಥಳಗಳು ಪ್ರವಾಸೋದ್ಯಮ, ಶಿಕ್ಷಣ ಹಾಗೂ ಸಾಂಸ್ಕೃತಿಕ ಐಕ್ಯತೆಯ ಕೇಂದ್ರವಾಗಿವೆ.

2025ರ ಹೊತ್ತಿಗೆ, 168 ರಾಷ್ಟ್ರಗಳಲ್ಲಿ 1,200ಕ್ಕೂ ಅಧಿಕ ಯುನೆಸ್ಕೊ ವಿಶ್ವ ಪರಂಪರೆ ತಾಣಗಳಿವೆ. ಇವುಗಳಲ್ಲಿ ಕೆಲವೆ ನೈಸರ್ಗಿಕ ಅದ್ಭುತಗಳು. ಗ್ರೇಟ್ ಬ್ಯಾರಿಯರ್ ರೀಫ್, ಸೆರೆಂಗೆಟಿ ಉದ್ಯಾನ, ಸುಂದರ್‌ಬನ್ ಕಾಡುಗಳು. ಬೌದ್ಧಿಕ ಹಾಗೂ ಭೌಗೋಳಿಕ ವಿಭಿನ್ನತೆಯ ಸಂಕೇತಗಳಾಗಿವೆ.

"ಪರಂಪರೆ ದಿನವು ಕೇವಲ ಆಚರಣೆಯ ದಿನವಲ್ಲ. ಅದು ಚಿಂತನೆಗೆ, ಜವಾಬ್ದಾರಿಗೆ ಮತ್ತು ಕ್ರಿಯೆಗೆ ಪ್ರೇರಣೆ ನೀಡುವ ದಿನ. ನಾವು ಹೇಗೆ ಪಾಲ್ಗೊಳ್ಳಬಹುದು, ಹತ್ತಿರದ ಪರಂಪರೆ ತಾಣಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸಿ-ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಳ್ಳಿ ಸ್ಥಳೀಯ ಪರಂಪರೆ ಯೋಜನೆಗಳಿಗೆ ಬೆಂಬಲ ನೀಡಿ, ಪರಿಸರ ಸ್ನೇಹಿ ಪ್ರವಾಸೋದ್ಯಮವನ್ನು ಉತ್ತೇಜಿಸಿ, ಮಕ್ಕಳಿಗೆ ಪರಂಪರೆಯ ಮೌಲ್ಯವನ್ನು ಬೋಧಿಸಿ ಪರಂಪರೆ ತಾಣಗಳು ಶಾಶ್ವತ ಶಿಲೆಗಳಲ್ಲ; ಅವುಗಳು ಬದುಕುಳ್ಳ ಇತಿಹಾಸ, ಸಂಸ್ಕೃತಿ ಮತ್ತು ಪ್ರಕೃತಿಯ ಚರಿತ್ರೆ. ಇವನ್ನು ಉಳಿಸುವುದು ನಮ್ಮೆಲ್ಲರ ಜವಾಬ್ದಾರಿ. ಏಪ್ರಿಲ್ 18ರಂದು ನಾವು ಈ ಜವಾಬ್ದಾರಿಯನ್ನು ಮತ್ತೆ ಮರೆತಿಲ್ಲ ಎಂಬುದನ್ನು ದೃಢಪಡಿಸೋಣ.

ಭವಿಷ್ಯದ ಪೀಳಿಗೆಗಳಿಗೂ ಇವತ್ತಿನ ನಮ್ಮ ಹೆಮ್ಮೆ, ಸಂಸ್ಕೃತಿ ಮತ್ತು ನೈಸರ್ಗಿಕ ವೈಭವವನ್ನು ಅನುಭವಿಸಲು ಅವಕಾಶ ಕಲ್ಪಿಸೋಣ.

## ಅಪಾಯದ ಮುನ್ಸೂಚನೆ

ಈ ಪರಂಪರೆ ತಾಣಗಳು ಇಂದು ಅನೇಕ ಸವಾಲುಗಳನ್ನು ಎದುರಿಸುತ್ತಿವೆ. ಹವಾಮಾನ ಬದಲಾವಣೆ, ನಗರೀಕರಣ, ಯುದ್ಧಗಳು, ನಿರ್ಲಕ್ಷ್ಯ ಮತ್ತು ಸುಸ್ಥಿರವಲ್ಲದ ಪ್ರವಾಸೋದ್ಯಮ. ಇದು ಪರಂಪರೆಯ ಅಸ್ತಿತ್ವಕ್ಕೆ ಚಡಪಡಿಸುವ ಪರಿಸ್ಥಿತಿ. ಪಾಂಪೀಯ ಶಿಥಿಲಗಳು, ವೆನಿಸ್ ನಗರದ ಜಲಮಟ್ಟದ ಏರಿಕೆ, ಸುಂದರ್‌ಬನ್‌ನ ಜೈವಿಕ ವೈವಿಧ್ಯತೆ ಎಲ್ಲವೂ ಅಪಾಯ ಎದುರಿಸುತ್ತಿವೆ.

## ಭಾರತದಲ್ಲಿ ಸಂರಕ್ಷಣೆಗೆ ನವ ಚೇತನ

ವಿಶ್ವ ಪರಂಪರೆ ದಿನವು ಭಾರತದಲ್ಲಿಯೂ ವಿಶೇಷ ಮಹತ್ವ ಹೊಂದಿದೆ. ವಿಶ್ವದ ಆರನೆಯ ದೊಡ್ಡ ಪರಂಪರೆ ತಾಣಗಳ ರಾಷ್ಟ್ರವಾಗಿ ಭಾರತ. ತನ್ನ ಐತಿಹಾಸಿಕ, ಸಾಂಸ್ಕೃತಿಕ ಮತ್ತು ನೈಸರ್ಗಿಕ ವೈಭವದಿಂದ ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುತ್ತಿದೆ.

ಭಾರತದಲ್ಲಿ 42 ಯುನೆಸ್ಕೊ ವಿಶ್ವ ಪರಂಪರೆ ತಾಣಗಳಿವೆ, ಇದರಲ್ಲಿ ತಾಜ್ ಮಹಲ್, ಹಂಪಿ, ಸುಂದರ್‌ಬನ್ ಕಾಡುಗಳು, ಎಲ್ಲೊರಾ-ಅಜಂತಾ ಗುಹೆಗಳು, ಕಾಜುರಾಹೋ, ಮಹಾಬಲಿಪುರಂ ಶಿಲ್ಪಗಳು ಮುಂತಾದವು ಪ್ರಮುಖವಾಗಿವೆ. ಇವು ಭಾರತೀಯ ಇತಿಹಾಸದ ವೈವಿಧ್ಯತೆ, ಕಲಾ ಪರಂಪರೆ ಹಾಗೂ ಧಾರ್ಮಿಕ ಸಹಿಷ್ಣುತೆಯ ಪ್ರತಿರೂಪಗಳಾಗಿವೆ. ಈ ದಿನ, ಭಾರತೀಯ ಹೇರಿಟೇಜ್ ಇಲಾಖೆ, ಅರ್ಕಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ (ASI), ಮತ್ತು ವಿವಿಧ ರಾಜ್ಯ ಸರ್ಕಾರಗಳು ಹೆರಿಟೇಜ್ ವಾಕ್ಸ್, ಪ್ರದರ್ಶನಗಳು ಮತ್ತು ಜಾಗೃತಿ ಅಭಿಯಾನಗಳ ಮೂಲಕ ಸಾರ್ವಜನಿಕರಲ್ಲಿ ಪರಂಪರೆಯ ಮಹತ್ವದ ಬಗ್ಗೆ ತಿಳವಳಿಕೆ ಮೂಡಿಸುತ್ತವೆ.

ಪರಂಪರೆ ತಾಣಗಳ ಸಂರಕ್ಷಣೆಯಲ್ಲಿ ಸಮುದಾಯದ ಭಾಗವಹಿಸುವಿಕೆ, ಶೈಕ್ಷಣಿಕ ಕಾರ್ಯಕ್ರಮಗಳು ಹಾಗೂ ಸುಸ್ಥಿರ ಪ್ರವಾಸೋದ್ಯಮದ ಉತ್ತೇಜನ ಎಂಬವು ಪ್ರಧಾನವಾದವು. ಹೀಗಾಗಿ, ವಿಶ್ವ ಪರಂಪರೆ ದಿನವು ಭಾರತದಲ್ಲಿ ಕೇವಲ ಆಚರಣೆಯ ದಿನವಲ್ಲ, ಅದು ಭವಿಷ್ಯದತ್ತ ಬದ್ಧತೆಯ ಸಂಕೇತವಾಗಿದೆ.

UNESCO

"2025ರ ಥೀಮ್ ನಿರೀಕ್ಷೆ ಮತ್ತು ನವೀನತೆ ಪ್ರತಿವರ್ಷ A ICOMOS ಒಂದು ಥೀಮ್ ಪ್ರಕಟಿಸುತ್ತದೆ. 2024ರ ಥೀಮ್ ವೆನಿಸ್ ಚಾರ್ಟರ್‌ನ ಲೆನ್ಸ್‌ನಿಂದ ವಿಪತ್ತುಗಳು ಮತ್ತು ಸಂಘರ್ಷಗಳು ಎಂಬದ್ದಾಗಿದ್ದು, ತುರ್ತು ಸಂದರ್ಭಗಳಲ್ಲಿ ಪರಂಪರೆಯ ರಕ್ಷಣೆಗೆ ಕೇಂದ್ರೀಕೃತವಾಗಿತ್ತು. 2025ರ ಥೀಮ್ ಇನ್ನೂ ಅಧಿಕೃತವಾಗಿ ಘೋಷಣೆಯಾಗಿಲ್ಲ, ಆದರೆ ಸುಸ್ಥಿರತೆಯನ್ನು ಕೇಂದ್ರವಾಗಿ ಹೊಂದಿರುವುದು ನಿರೀಕ್ಷಿತ.

# ಜಾತಿ ಗಣತಿ ವೈಜ್ಞಾನಿಕವಲ್ಲ: ಸೂರಜ್ ರೇವಣ್ಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಯಾರೋ ಇಬ್ಬರು ನಿವೃತ್ತ ಅಧಿಕಾರಿಗಳಿಂದ ಬರೆಸಿದ ವರದಿಯನ್ನು ಜಾತಿ ಗಣತಿ ಎನ್ನಲು ಸಾಧ್ಯವಿಲ್ಲ. ಓಲೈಕೆ ರಾಜಕಾರಣದ ಮೂಲಕ ಜನರ ದಾರಿ ತಪ್ಪಿಸುವ ಯತ್ನ ನಡೆದಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಆಕ್ರೋಶ ವ್ಯಕ್ತಪಡಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾರೋ ಇಬ್ಬರನ್ನು ಕೂರಿಸಿ ಜಾತಿ ಗಣತಿ ಬರೆಸಿರುವ ರೀತಿ ಇದೆ. ಇದರಲ್ಲಿ ವೈಜ್ಞಾನಿಕ ದತ್ತಾಂಶ ಇಲ್ಲ, ಅದಕ್ಕೆ ಪೂರಕವಾದ ಸಾಕ್ಷ್ಯವೂ ಇಲ್ಲ. ನನ್ನ ದೃಷ್ಟಿಯಲ್ಲಿ ಯಾರೋ ಒಬ್ಬರು ಅಥವಾ ಇಬ್ಬರು ನಿವೃತ್ತ ಐಎಎಸ್, ಕೆಎಎಸ್ ಅಧಿಕಾರಿಗಳಿಂದ ತಯಾರಾದ ವರದಿಯನ್ನು ಮಂಡಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ ಎಂದರು.

ಜಾತಿ ಗಣತಿ ಬಗ್ಗೆ ಪ್ರಸ್ತಾಪ ಮಾಡುತ್ತಿರುವುದು ಹೊಸದೇನಲ್ಲ, ಸುಮಾರು ನಾಲ್ಕು ವರ್ಷಗಳಿಂದ ಪ್ರಕ್ರಿಯೆ ನಡೆಯುತ್ತಿದೆ. ಜನಸಂಖ್ಯೆ ಆಧಾರದ ಮೇಲೆ ಇಂತಿಷ್ಟು ಅನುದಾನ ಹಂಚಿಕೆ ಮಾಡುವ ಪ್ರಕ್ರಿಯೆ ಜಾತಿ ಗಣತಿ ಆಧಾರದಲ್ಲಿ ನಡೆಯುತ್ತದೆ. ಜನರ ಬಗ್ಗೆ ಕಾಳಜಿ ಇರುವವರು ವೈಜ್ಞಾನಿಕ ಅಂಕಿ ಅಂಶ ಪರಿಗಣಿಸಬೇಕೆ ಹೊರತು ಯಾರೋ ಬರೆದು ಕೊಟ್ಟಿದ್ದನ್ನಲ್ಲ ಎಂದು ವಾಗ್ದಾಳಿ ನಡೆಸಿದರು.


ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಅಧೋಗತಿ ತಲುಪಿದೆ. ಜಾತಿ ಓಲೈಕೆ ರಾಜಕಾರಣ ಮಿತಿ ಮೀರಿದೆ. ನಮ್ಮ ಸಮಾಜ ಒಡೆಯುವ ಕೆಲಸಕ್ಕೆ ಈ ಸರ್ಕಾರ ಕೈ ಹಾಕಿದೆ. ಹಿಂದುಳಿದ ಸಮಾಜದ ಏಳಿಗೆಗೆ ಜಾತಿ ಗಣತಿ ಮಾಡುತ್ತಾರೆ. ಆದರೆ ಇವರು ಒಂದು ಸಮಾಜವನ್ನು ಒಡೆದು ಸ್ವಹಿತಾಸಕ್ತಿ ರಾಜಕಾರಣ ಮಾಡುತ್ತಿದ್ದಾರೆ. ರಾಜಕೀಯ ಲಾಭಕ್ಕಾಗಿ ಜಾತಿ ಓಲೈಕೆ ಸರಿಯಾದ ಬೆಳವಣಿಗೆಯಲ್ಲ ಎಂದರು.

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಕೇತಗಾನಹಳ್ಳಿ ಜಮೀನು ತೆರವು ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಪ್ರಕರಣ ನ್ಯಾಯಾಲಯ ಮೆಟ್ಟಿಲೇರಿರುವುದರಿಂದ ಅದರ ಬಗ್ಗೆ ಮಾತನಾಡುವುದು ಸರಿಯಲ್ಲ. ಈ ಸರ್ಕಾರ ಕುಮಾರಸ್ವಾಮಿ ಅವರನ್ನು ಮಾತ್ರವಲ್ಲ ನಮ್ಮ ಕುಟುಂಬವನ್ನು ಗುರಿಯಾಗಿಸಿ ದ್ವೇಷ ರಾಜಕಾರಣ ಮಾಡುತ್ತಿದೆ. ಅದನ್ನೆಲ್ಲ ರಾಜ್ಯದ ಜನರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ನಮ್ಮ ಪಕ್ಷದ ಪ್ರತಿ ಶಾಸಕರನ್ನು ಟಾರ್ಗೆಟ್ ಮಾಡಲಾಗುತ್ತಿದೆ ಎಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

# ರಕ್ತದಾನ ಮಾಡಿ ಪ್ರಾಣ ಉಳಿಸಿ: ಸಿದ್ದೇಗೌಡ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ದೇಶದ ನಿಜವಾದ ಸಂಪತ್ತು ಯುವಶಕ್ತಿ, ಹಾಗಾಗಿ ಯುವಕರು ತಮ್ಮ ಆರೋಗ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಮುಂದಾಗಬೇಕು ಮತ್ತು ರಕ್ತದಾನ ಮಾಡುವ ಮೂಲಕ ಆರೋಗ್ಯವಂತರಾಗಬೇಕು ಎಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಬೇಲೂರು ಸಭಾಪತಿ ವೈ.ಎಸ್. ಸಿದ್ದೇಗೌಡ ಕರೆ ನೀಡಿದರು.




ಪಟ್ಟಣದ ಹೊರವಲಯದಲ್ಲಿ ವೈಡಿಡಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಬೇಲೂರು ಹಾಗೂ ವೈಡಿಡಿ ಕಾಲೇಜು, ಐಕ್ಯೂಎಸಿ ಯುವ ರೆಡ್ ಕ್ರಾಸ್ ಘಟಕ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರ ಮತ್ತು ಆರೋಗ್ಯದ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಕ್ತದಾನದ ಬಗ್ಗೆ ಹಲವು ಪ್ರಯೋಜಗಳಿಗೆ ಒಂದು ಜೀವ ಉಳಿಸುವ ನಿಟ್ಟಿನಲ್ಲಿ ರಕ್ತದಾನ ಅತ್ಯಂತ ಪ್ರಾಮುಖ್ಯತೆ ಪಡೆಯುತ್ತದೆ. ಇತ್ತೀಚಿನ ದಿನದಲ್ಲಿ ಹೆಚ್ಚು ಅಪಘಾತಗಳು ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ರಕ್ತದಾನದ ಬಗ್ಗೆ ಹೆಚ್ಚು ಜಾಗೃತಿಯನ್ನು ಮೂಡಿಸುವ ಅವಶ್ಯವಿದೆ. ಸದೃಢವಾಗಿರುವ ಮನುಷ್ಯ 18 ರಿಂದ 60 ವರ್ಷ ಒಳಗಿನ ವ್ಯಕ್ತಿ ವರ್ಷದಲ್ಲಿ ಮೂರು ಬಾರಿ ರಕ್ತದಾನ ಮಾಡಬಹುದು. ತಪ್ಪು ಕಲ್ಪನೆಗಳಿಂದ ಹೊರಬಂದು ಯುವಕರು ರಕ್ತದಾನಕ್ಕೆ ಮುಂದಾಗಿ ಎಂದ ಅವರು ಆರೋಗ್ಯವೇ ಭಾಗ್ಯ. ಈ ನಿಟ್ಟಿನಲ್ಲಿ ಅನಾರೋಗ್ಯದಿಂದ ದೂರ ಇರಲು ಯೋಗ ಸೇರಿದಂತೆ ಪರಿಸರ ಪೂರಕ ಅಂಶಗಳನ್ನು ಅಳವಡಿಸಿಕೊಳ್ಳಿ ನಿಜಕ್ಕೂ ವೈಡಿಡಿ ಕಾಲೇಜು ಇಂತಹ ಕಾರ್ಯಕ್ಕೆ ಅನುವು ಮಾಡಿದ್ದು ಸಂತೋಷ ತಂದಿದೆ ಎಂದರು.

ಬೇಲೂರು ವೈಡಿಡಿ ಪ್ರಥಮ ದರ್ಜೆ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಹೆಬ್ಬಾಳು ಹಾಲಪ್ಪ ಮಾತನಾಡಿ, ಶರವೇಗದಿಂದ ಬೆಳೆಯುತ್ತಿರುವ ವಿಜ್ಞಾನ, ಅಷ್ಟೇ ವೇಗದಿಂದ ಕೂಡಿದ ಪೂಜೆ ಕಾರ್ಯಗಳು ಒಂದು ಹನಿ ರಕ್ತವನ್ನು ಉತ್ಪತ್ತಿ ಮಾಡಲು ಸಾಧ್ಯವೇ. ಒಂದು ಹಿಡಿ ರಾಗಿ, ಭತ್ತ ಸೃಷ್ಟಿಸಲು ಸಾಧ್ಯವೇ. ಈ ದಿಶೆಯಲ್ಲಿ ಸದೃಢವಾದ ಮನುಷ್ಯ ರಕ್ತದಾನಕ್ಕೆ ಯಾವುದೇ ಅಡತಡೆ ಇಲ್ಲದೆ ಇನ್ನೊಬ್ಬರ ಜೀವ ಉಳಿಸಲು ಮುಂದಾಗಬೇಕು. ರಕ್ತದಾನವನ್ನು ಖಾಸಗಿ ಸಂಸ್ಥೆಗಳಿಗೆ ನೀಡಿದೆ ಸರ್ಕಾರಿ ಆಸ್ಪತ್ರೆಗಳು ನಡೆಸುವ ಶಿಬಿರಕೆ ಮಹತ್ವ ನೀಡಿ. ಅಲ್ಲದೆ ಇತ್ತೀಚಿನ ಯುವ ಜನಾಂಗ ಫ್ಯಾಷನ್ ನಿಂದ ಆರಂಭವಾದ ದುಶ್ಚಟಗಳು ಕುಟುಂಬಗಳಿಗೆ ಮಾರಕವಾಗಬಹುದು ಎಂದು ತಿಳಿಸಿದರು.

ವೈಡಿಡಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಮಹೇಶ್, ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಅದ್ದೂರಿ ಚೇತನ್, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಅಜೀತ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ವಿಜಯ್, ಅರೇಹಳ್ಳಿ ವೈದ್ಯಾಧಿಕಾರಿ ಡಾ. ಮಮತ, ಐಕ್ಯೂಎಸಿ ಸಂಚಾಲಕ ಡಾ. ನಾಗೇಂದ್ರಪ್ಪ, ಯುವ ರೆಡ್ ಕ್ರಾಸ್ ಸಂಚಾಲಕ ಮೋಹನ್ ಕುಮಾರ್, ಬೇಲೂರು ರೆಡ್ ಕ್ರಾಸ್ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಧನಂಜಯ್, ರಾಜುಕುಮಾರ್, ಸುಲೈಮಾನ್, ವೀರಭದ್ರಪ್ಪ, ಬಾಬು, ಡಾ.ಚೇತನ್ ಹಾಜರಿದ್ದರು.

## ಏ. 19ಕ್ಕೆ ಅಂಬೇಡ್ಕರ್ ಜಯಂತಿ

ಹಾಸನ: ಜಿಲ್ಲಾ ವಕೀಲರ ಸಂಘದಿಂದ ಏ. 19ರ ಶನಿವಾರ ಬೆಳಿಗ್ಗೆ 10 ಗಂಟೆಗೆ ವಕೀಲರ ಸಂಘದ ಹೊಯ್ಸಳ ವೇದಿಕೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತಿ ಹಮ್ಮಿಕೊಳ್ಳಲಾಗಿದೆ.

ಮುಂಡರಗಿ ತೋಂಟದಾರ್ಯ ಮಠದ ಶ್ರೀ ನಿಜಗುಣಾನಂದ ಸ್ವಾಮೀಜಿ ಸಾನಿಧ್ಯ ವಹಿಸುವರು. ಹೈಕೋರ್ಟ್ ನ್ಯಾ. ಹೆಚ್.ಟಿ. ನರೇಂದ್ರ ಪ್ರಸಾದ್ ಉದ್ಘಾಟನೆ ನೆರವೇರಿಸುವರು. ನ್ಯಾ. ಹೆಚ್.ಪಿ. ಸಂದೇಶ್, ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶೆ ಹೇಮಾವತಿ ಉಪಸ್ಥಿತಿ ವಹಿಸಲಿದ್ದಾರೆ. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಟಿ. ಪ್ರಸನ್ನ ಅಧ್ಯಕ್ಷತೆ ವಹಿಸಲಿದ್ದಾರೆ.

# ಕಿರುಕುಳಕ್ಕೆ ಬೇಸತ್ತು ಗೃಹಿಣಿ ಆತ್ಮಹತ್ಯೆ

ಆಲೂರು: ಪತಿ ಕಿರುಕುಳ ತಾಳಲಾರದೆ ಗೃಹಿಣಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಗ್ರಾಮದ ವೆಂಕಟೇಶ್ ಅವರ ಪುತ್ರಿ ರಕ್ಷಿತಾ (21) ಮೃತರು. ಅದೇ ಗ್ರಾಮದ ಪುನೀತ್ ಎಂಬಾತನನ್ನು ಪ್ರೀತಿಸಿ ಮೂರು ವರ್ಷಗಳ ಹಿಂದಷ್ಟೇ ಮದುವೆಯಾಗಿದ್ದರು.

ಹಾಸನದಲ್ಲಿ ಬಾಡಿಗೆ ಮನೆಯಲ್ಲಿದ್ದ ದಂಪತಿ ಮಧ್ಯೆ ಇತ್ತೀಚೆಗೆ ಬಿರುಕು ಉಂಟಾಗಿತ್ತು. ತವರು ಮನೆಯಿಂದ ಹಣ ತರುವಂತೆ ಪುನೀತ್ ಪೀಡಿಸುತ್ತಿದ್ದ. ಮನೆ ಬಾಡಿಗೆ ಕಟ್ಟಲು ಹಣವಿಲ್ಲ, ಅಪ್ಪನ ಹೆಸರಿನಲ್ಲಿರುವ ಮನೆಯೊಂದನ್ನು ಬರೆಸಿಕೋ ಎಂದು ನಿತ್ಯ ಜಗಳ ಮಾಡುತ್ತಿದ್ದ. ಹಾಸನದಲ್ಲಿ ಕುಟುಂಬ ನಿರ್ವಹಣೆ ಸಾಧ್ಯವಾಗದೆ ವಾರದ ಹಿಂದಷ್ಟೇ ಕಣದಹಳ್ಳಿಯಲ್ಲಿ ಬಾಡಿಗೆ ಮನೆ ಮಾಡಿ ಅಲ್ಲಿಗೆ ಸ್ಥಳಾಂತರಗೊಂಡಿದ್ದರು. ದಂಪತಿಗೆ ಒಂದು ವರ್ಷದ ಮಗುವಿದ್ದು ಪುನೀತ್ ಅದರ ಆರೈಕೆಯನ್ನು ಕಡೆಗಣಿಸಿದ್ದ ಎನ್ನಲಾಗಿದೆ.

ಅತ್ತೆ ಮಾವ ಸಹ ತವರಿನಿಂದ ವರದಕ್ಷಿಣೆ ತರುವಂತೆ ಹಿಂಸೆ ನೀಡುತ್ತಿದ್ದರು. ಈ ಎಲ್ಲಾ ಅವಮಾನ ಸಹಿಸಲಾಗದೆ ಬುಧವಾರ ಸಮಯದಲ್ಲಿ ಮನೆಯಲ್ಲಿ ನೇಣಿಗೆ ಶರಣಾಗಿದ್ದಾರೆ. ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಏ. 25ಕ್ಕೆ ದಿಶಾ ಸಭೆ

ಹಾಸನ: ಸಂಸದ ಶ್ರೇಯಸ್ ಪಟೇಲ್ ಅವರ ಅಧ್ಯಕ್ಷತೆಯಲ್ಲಿ ಏ.25ರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನೆ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ(ದಿಶಾ) ಸಭೆ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ತಿಳಿಸಿದ್ದಾರೆ.

## ಇತಿಹಾಸದಲ್ಲಿ ಈ ದಿನ

### ಏಪ್ರಿಲ್ 18

1930 – ಚಿತ್ತಗಾಂಗ್ ಶಸ್ತ್ರಾಗಾರ ದಾಳಿ: ಸುರ್ಯ ಸೇನ್ ನೇತೃತ್ವದಲ್ಲಿ ಕ್ರಾಂತಿಕಾರರು ಬ್ರಿಟಿಷ್ ಆಳ್ವಿಕೆಗೆ ವಿರೋಧವಾಗಿ ಬಂಗಾಳದ ಚಿಟಗಾಂಗ್ ನಲ್ಲಿ ಶಸ್ತ್ರಾಗಾರ ದಾಳಿ ನಡೆಸಿದರು. ಇದು ಸ್ವಾತಂತ್ರ್ಯ ಹೋರಾಟದ ಪ್ರಮುಖ ಘಟ್ಟ.

1906 – ಸಾನ್ ಫ್ರಾನ್ಸಿಸ್ಕೋ ಭೂಕಂಪ (ಅಮೆರಿಕ): ತೀವ್ರ ಭೂಕಂಪದಲ್ಲಿ 3,000ಕ್ಕೂ ಹೆಚ್ಚು ಜನರು ಮೃತಪಟ್ಟರು, ನಗರದಲ್ಲಿ ಭಾರಿ ನಾಶ.

1942 – ಡೂಲಿಟಲ್ ದಾಳಿ (ಅಮೆರಿಕ-ಜಪಾನ್): ಅಮೆರಿಕದ ಬಾಂಬರ್ ವಿಮಾನಗಳು ಮೊದಲ ಬಾರಿಗೆ ಟೋಕಿಯೋ ಮೇಲೆ ದಾಳಿ ನಡೆಸಿದ ಮಹತ್ವದ ಯುದ್ಧ ಘಟನೆ.

1955 – ಐನ್‌ಸ್ಟೈನ್ ನಿಧನ: ಪ್ರಸಿದ್ಧ ಭೌತಶಾಸ್ತ್ರಜ್ಞ ಅಲ್ಬರ್ಟ್ ಐನ್ ಸ್ಟೈನ್ ನಿಧನರಾದರು.

1980 – ಜಿಂಬಾಬ್ವೆ ಸ್ವಾತಂತ್ರ್ಯ ದಿನ: ಬ್ರಿಟಿಷ್ ಆಳ್ವಿಕೆಯಿಂದ ಮುಕ್ತವಾಗಿ ಅಧಿಕೃತವಾಗಿ ರಾಷ್ಟ್ರವಾಗಿ ಘೋಷಿಸಲ್ಪಟ್ಟ ದಿನ.

**ಆಚರಣೆಗಳು**

ಅಂತರರಾಷ್ಟ್ರೀಯ ಸ್ಮಾರಕ ದಿನ (World Heritage Day): ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಗೆ ಸಮರ್ಪಿತ ದಿನ

# ಚಳ್ಳೆಹಣ್ಣು ತಿನ್ನಿಸಿದ ಬೆಣ್ಣೆ ಜಲಪಾತ

ರಜನೀಶ್ ಸಾಗರ


ಕಾಡು, ಕೆರೆ, ಬೆಟ್ಟ, ಹೊಳೆ, ಪುರಾತನ ದೇವಾಲಯಗಳು. ವಿಶಾಲ ಹುಲ್ಲುಗಾವಲುಗಳು ಇನ್ನೂ ಅನೇಕ ನಿಸರ್ಗದ ಪಾಕದಲ್ಲಿ ಮಿಂದೇಳುವ ವಿಷಯಗಳು ನನ್ನನ್ನು ಸದಾ ಇವುಗಳೆಡೆಗೆ ತುಡಿಯುವಂತೆ ಮಾಡುತ್ತಿರುತ್ತವೆ.

ಹೀಗೆ ಸಮಾನ ಮನಸ್ಕರು ಸೇರಿ, ಉಂಚಳ್ಳಿ ಜಲಪಾತ ಎಂದೂ ಹೆಸರು ಕೇಳಿರದ ಬೆಣ್ಣೆ ಜಲಪಾತ, ಮಂಜುಗುಣಿಯ ಪುರಾತನ ವೆಂಕಟೇಶ್ವರನ ದೇವಾಲಯ ಮತ್ತು ಯಾಣದ ಕಡೆ ಒಂದು ತಿರುಗಾಟ ಮಾಡೋಣವೆಂದಾಯಿತು. ಐವತ್ತು ಜನಕ್ಕೆ ಅವಕಾಶವಿದ್ದದ್ದು ಮಾತ್ರವಾದರೂ ಐದಾರು ಜನ ಹೆಚ್ಚಾಗಿ ಬಂದರು. ತೊಂದರೆಯಿಲ್ಲವಲ್ಲ, ಎಲ್ಲರೂ ನಮ್ಮವರೇ. ಹೊಂದಾಣಿಕೆ ಮಾಡಿಕೊಂಡು ಬೆಳಗ್ಗೆ ಐದೂವರೆಗೆ ನಮ್ಮೂರಿನಿಂದ ಹೊರಡುವುದೆಂದಾಯಿತು.

ನಮ್ಮನೆಯವರೇ ನಾಲ್ಕು ಜನ. ಮೊದಲಿಂದಲೂ ತಿರುಗಾಟಕ್ಕೆ ಹೊರಡುವುದೆಂದಾರೆ ಹುಮ್ಮಸ್ಸು ಎಲ್ಲಿಂದ ಬರುತ್ತದೆಯೋ ಗೊತ್ತಿಲ್ಲ. ಆ ಹುಮ್ಮಸ್ಸಿನಲ್ಲಿ ನಿದ್ದೆಯೇ ಬರಲ್ಲ! ಕುತೂಹಲ, ಕಾತುರಗಳಲ್ಲಿಯೇ ರಾತ್ರಿ ಮುಗಿದು, ತಯಾರಾಗಿ ಹೊರಡುವ ವೇಳೆ ಬಂದಾಗಿರುತ್ತದೆ. ನಮಗೆ ಸಮಯಕ್ಕೆ ಸರಿಯಾಗಿ ಹೊರಡದಿದ್ದರೆ ಮನಸ್ಸಿಗೆ ಕಿರಿಕಿರಿ. ನಮಗಾಗಿದ್ದು ಇನ್ನೊಬ್ಬರಿಗೆ ಆಗಬೇಕಿಂದಿಲ್ಲವಲ್ಲ.

ಕೆಲವರು ಇಂಡಿಯನ್ ಟೈಮ್ ಮೆಂಟೈನ್ ಮಾಡುವವರಿರುತ್ತಾರೆ. ಅಂತವರು ಒಂದು ತರ ಬಿಸಿ ತುಪ್ಪ ಇದ್ದಂಗೆ. ನುಂಗಂಗಿಲ್ಲ, ಉಗುಳಂಗಿಲ್ಲ. ಅವರೆಲ್ಲ ಒಂದು ಗಂಟೆಗೂ ಅಧಿಕ ಸಮಯ, ಸಮಯಕ್ಕೆ ಸರಿಯಾಗಿ ಬಂದವರಿಗೆ ಕಾಯಿಸಿ, ಕೊನೆಗೆ ಬಂದು ಹತ್ತುವವರು, ಲೇಟ್ ಲತೀಫರು! ಅಂತೂ ಬಸ್ ಉಸ್ ಎಂದು ಸುಧಾರಿಸಿಕೊಂಡು ಕುಲುಕಾಡುತ್ತ ಹೊರಟಿತು.

ಸಣ್ಣ ಸಣ್ಣ ರಸ್ತೆಗಳಲ್ಲಿ ನಾಜೂಕಾಗಿ ಚಲಿಸಿ ನಮ್ಮನ್ನು ಉಂಚಳ್ಳಿ ಜಲಪಾತಕ್ಕೆ ತಂದಿಳಿಸಿತು. ಮುಂದಿನ ಕಾರ್ಯಕ್ರಮ ಬಹಳ ಮುಖ್ಯವಾದದ್ದು, ಬಹಳ



ಸಂತಸದ ವಿಚಾರ ಪಾರ್ಸೆಲ್ ತಂದ ತಿಂಡಿ ಎಲ್ಲರೂ ಬಡಿಸಿಕೊಂಡು ತಿನ್ನುವುದು. ಮನೆದಾದರೇ ಅಷ್ಟು ಆಸಕ್ತಿ ಬರಲ್ಲ, ಹೋಟೆಲ್ ದಲ್ಲವೆ ಹಾಗಾಗಿ ತಿನ್ನಲು ಕೊಂಚ ಅವಸರ. ಮೂರು ಮೂರು ಇಡ್ಲಿ, ಒಂದೊಂದು ಉದ್ದಿನ ವಡಾ, ಬಿಸಿ ಬಿಸಿ ಸಾಂಬಾರು, ಗಟ್ಟಿ ಚಟ್ನಿ. ಲಗುಬಗೆಯಿಂದ ಒಳಗಿಳಿಸಿ, ನೀರು ಕುಡಿದು ಜಲಪಾತದ ಕಡೆ ನಡೆದೆವು. ಬಂಡೆಗಲ್ಲುಗಳ ಮೇಲೆ ಬೆಳ್ಳಗೆ ಹಾಲಿನಂತೆ ಇಳಿದು ಬರುವ ಗಂಗಾಮಾಯಿ ಮನಸ್ಸರಳಿಸುವಳು. ಉಂಚಳ್ಳಿಯ ಚೆಲುವೆ ಚಿತ್ರಾವತಿಯ ಅಂದ ಚೆಂದ ಸೆರೆ ಹಿಡಿದು ಅಲ್ಲಿಂದ ಹೆಸರು ಎಷ್ಟು ಚೆಂದ ಇದೆ ನೋಡಿ, ಬೆಣ್ಣೆ ಜಲಪಾತವಂತೆ. ಆ ಕಡೆ ಪಯಣ.

ಖೂರ್ಸೆ ಎನ್ನುವ ಊರಿನಿಂದ ಅಂದಾಜು ಐದಾರು ಕಿ.ಮೀ ಗಳ ಚಾರಣ. ಮೊದಲು ಒಂದೆರೆಡು ಕಿ.ಮೀ ಸಿಮೆಂಟ್ ರಸ್ತೆ. ಆನಂತರ ಮಣ್ಣಿನ ರಸ್ತೆ. ರಸ್ತೆಯುದ್ದಕ್ಕೂ ಮುಗಿಲೆತ್ತರಕ್ಕೆ ಕೈ ಚಾಚಿ ಬೆಳೆದ ಮರಗಳ ಸಾಲು. ರಸ್ತೆಯ ಮೇಲೆ ದಟ್ಟ ನೆರಳು, ತಣ್ಣನೆಯ ಗಾಳಿ, ದಾರಿಯುದ್ದಕ್ಕೂ ಎಂದೆಂದೂ ನೋಡಿರದ ಚಿತ್ರವಿಚಿತ್ರ ಕಾಯಿ ಹಣ್ಣುಗಳ ಮೇಳ. ವಿಶಿಷ್ಟ ಪರಿಮಳ ಪಸರಿಸುವ ಕಾನನದ ಪುಷ್ಪಗಳು. ನಡುವೆ ಬಾಲ್ಯ, ಯೌವನ ಮತ್ತು ವಯಸ್ಸು ಸಂದವರ ಗುಂಪುಗಳ ಚಲನೆ. ಚುರುಕು ಸಂಯಮ ಮತ್ತು ಮೌನವಾಗಿ ಪ್ರಕೃತಿ ಆರಾಧಿಸುತ್ತ ಚಲಿಸುವ ತಂಡಗಳು. ಇದ್ದಕ್ಕಿದ್ದಂತೆ ರಸ್ತೆ ಮುಗಿದು ಮರಗಳ ನಡುವೆ ನುಸುಳಿಕೊಂಡು ಹೋಗಬೇಕಾದ ಹಾದಿ ತೆರೆಯಿತು. ಅಲ್ಲಿ ಸ್ವಲ್ಪ ಪ್ರಮಾಣದ ನೀರಿತ್ತು. ಜೊತೆಗೆ ತಂಪಾದ ವಾತಾವರಣದ ಕಾರಣ ಸೊಳ್ಳೆಗಳು ಮಂದ್ರ ಸ್ವರದ ಸಂಗೀತದಲ್ಲಿ ನಮ್ಮನ್ನು ಸ್ವಾಗತಿಸಿ ಮುಖ, ಕುತ್ತಿಗೆಗೆ ಮುದ್ದು ಮಾಡಲು ತವಕಿಸುತ್ತಿದ್ದವ. ಇಂಬಳಗಳ ರಾಶಿ ನಮ್ಮನ್ನು ಕಂಡು ಆನಂದದಿಂದ ನಮ್ಮ ಕಾಲುಗಳನ್ನು ತಬ್ಬಿಕೊಳ್ಳಲು ಆತುರ ಮಾಡತೊಡಗಿದವು. ಹೇಳಬೇಕೆಂದರೆ ಅವುಗಳಿಗೆ ಕೊಂಚ ಬೇಜಾರೇ ಆಯಿತೊ ಏನೋ? ಒಬ್ಬರಿಗಿಂತ ಒಬ್ಬರು ಹುಷಾರಾಗಿದ್ದರೂ ಅವರ ಆತಿಥ್ಯ ತಪ್ಪಿಸಿಕೊಂಡು ಮುಂದುವರೆದೆವು.

ಮುಂದುವರೆದಂತೆ ದಾರಿ ಕಡಿದಾಗಿ ಇಳಿಜಾರು ವಿಪರೀತವಾಗಿ ಮರಗಿಡಗಳನ್ನು ಆಸರೆಯಾಗಿ ಹಿಡಿದುಕೊಳ್ಳುತ್ತಾ, ಬೇರುಗಳ ಮೇಲೆ ಪಾದವೂರುತ್ತ, ಒಬ್ಬರಿಗೊಬ್ಬರು ಸಹಕರಿಸುತ್ತ ನಿಧಾನವಾಗಿ ಕೆಳಗಿಳಿಯತೊಡಗಿದೆವು. ಬೆಣ್ಣೆ ಜಲಪಾತದ ಸಪ್ಪಳ ಸಣ್ಣದಾಗಿ ಆರಂಭವಾಗಿದ್ದು ಹತ್ತಿರಾದಂತೆ ದೊಡ್ಡದಾಗತೊಡಗಿತು. ಅಂತೂ ಇಂತೂ ದೂರದಲ್ಲಿ ಜಲಪಾತ ಗೋಚರಿಸತೊಡಗಿತು. ಬೇಸಿಗೆಯಾಗಿದ್ದರಿಂದ ನೀರು ಬಂಡೆಗಲ್ಲುಗಳ ಮೇಲಿನಿಂದ ಬೆಳ್ಳಿಯ ಗೆರೆಯಂತೆ ತೋರುತಿತ್ತು. ಆಯಾಸ ದೂರಾಗಿ ಉತ್ಸಾಹದಿಂದ ಕೆಳಗಿಳಿಯುತ್ತಿದ್ದವರಿಗೆ ಇದ್ದಕ್ಕಿದ್ದಂತೆ ಕಾಲುದಾರಿ ಮುಕ್ತಾಯವಾಗಿ ಮುಂದುವರೆಯಲು ಸಾಧ್ಯವಿಲ್ಲದೆ ಹೋಯಿತು. ಯಾವ ಕಡೆಯಿಂದ ನೋಡಿದರೂ ಕೆಳಗಿಳಿಯುವ ದಾರಿ ಕಾಣಲಿಲ್ಲ. ಹಂಗಂತ ನಮಗಿಂತ ಮೊದಲು ಹೋದ ಬೆರಳೆಣಿಕೆಯ ಹುಡುಗರು ಅದು ಯಾವ ಮಾಯದಲ್ಲೋ, ಹೇಗೋ ಇಳಿದುಬಿಟ್ಟಿದ್ದರು. ಅವರು ಅಲ್ಲಿಂದಲೇ ಯಾರೂ ಕೆಳಗಿಳಯಬೇಡಿ ಎಂದು ಎಚ್ಚರಿಕೆ ನೀಡಿದರು. ಬಂದ ದಾರಿಗೆ ಸುಂಕವಿಲ್ಲವೆಂಬಂತೆ ನಿರಾಸೆಯಿಂದ ಇಳಿಜಾರು ಹತ್ತತೊಡಗಿದೆವು. ಭಾರವಾದ ಮನಸ್ಸು, ನೀರಾಟವಾಡಿದಾಗ ಬಟ್ಟೆ ಬದಲಾಯಿಸಲು ತಗೆದುಕೊಂಡು ಹೋಗಿದ್ದ ಬಟ್ಟೆ ಚೀಲ, ನೀರಿನ ಬಾಟಲಿಗಳು, ತಿಂಡಿಗಳ ಒಜ್ಜೆ ಈಗ ಯಮ ಭಾರವಾಗತೊಡಗಿತು.

ಎತ್ತರಕ್ಕೆ ಬೆಳೆದ ವೃಕ್ಷ ರಾಶಿ, ಸುತ್ತಮುತ್ತಲಿನ ಬೆಟ್ಟಗುಡ್ಡಗಳ ಅಗಾಧತೆ, ಘನ ಗಂಭಿರ ಮೌನ, ನಿಸರ್ಗದ ನಿಗೂಢತೆಯ ಮುಂದೆ ನಾವೆಷ್ಟು ಕುಬ್ಜರು ಎಂದರಿವಾಗತೊಡಗಿತು. ಹಿಂತಿರುಗವಾಗ ಕೆಲವರು ದಾರಿತಪ್ಪಿ ಸಮಯ ಪೋಲಾಯಿತು.

ಮಧ್ಯಾಹ್ನ ಮೂರು ಗಂಟೆಯ ಸಮಯ. ಊಟವಾಗಿಲ್ಲ. ಸಮೀಪದ ಊರ ಬಳಿಯ ಹೋಟೆಲ್‌ನಲ್ಲಿ ಊಟ ಮಾಡಿ ಯಾಣದ ಕಡೆ ಪ್ರಯಾಣ ಬೆಳೆಸೋಣವೆಂದರೆ ಸಮಯದ ಅಭಾವ. ಮತ್ತೆ ಅಲ್ಲಿ ಹೋಗ್ತಾ ಬರ್ತಾ ಹದಿನಾಲ್ಕು ಕಿ.ಮೀ. ದೂರದ ಚಾರಣ! ಇದಾಗಲ್ಲವೆಂದು ಬೇಸರದಿಂದ ಯಾಣದ ಕಡೆ ಪ್ರಯಾಣ ರದ್ದುಗೊಳಿಸಿ ಪುರಾತನ ದೇವಾಲಯವಿರುವ ಮಂಜುಗುಣಿಯ ಕಡೆ ಹೊರಟೆವು.

ಮಂಜುಗುಣಿ ವೆಂಕಟೇಶ ಪದ್ಮಾವತಿಯ ಆವಾಸ ತಾಣ. ಹತ್ತಕ್ಕೂ



ಅಧಿಕ ಶತಮಾನಗಳ ಪುರಾತನ ಗುಡಿ. ದೇವಾಲಯ ಎದುರಿಗೆ ವಿಶಾಲ ರಾಜ ಬೀದಿ. ಕೊಂಚ ಮುಂದೆ ಬಂದರೆ ವಿಸ್ತಾರವಾದ ಸ್ವಚ್ಛ ಪುಷ್ಕರಣಿ. ನಮ್ಮ ಅದೃಷ್ಟವೆಂದರೆ ಜಾತ್ರೆ ಆರಂಭವಾಗಿ ರಥೋತವ ಜರುಗಿತ್ತು. ಬಹಳ ದೊಡ್ಡ ತೇರು. ಅದನ್ನು ಹತ್ತಿ ರಥದೊಳಗೆ ಪ್ರವೇಶ ಮಾಡಿ ಒಂದು ಸುತ್ತು ಸುತ್ತು ಹಾಕಿ ಬಂದೆವು. ರಥದೊಳಗೆ ಹೇಗೆ ಇರುತ್ತದೆ. ಏನೂ ಗೊತ್ತಿಲ್ಲದ ನಮಗೆ ಅಂದು ಬಹಳ ದೊಡ್ಡ ಯೋಗ. ರಥದೊಳಗೆ ಪ್ರವೇಶ ಮಾಡುವ ಯೋಗ. ಭಗವಂತನಿಗೆ ಸಾಷ್ಟಾಂಗ ನಮಸ್ಕಾರ ಹಾಕಿ ಅಲ್ಲಿಂದ ಹೊರಡುವ ಮುನ್ನ ನಮ್ಮ ಗುಂಪು ಛಾಯಾಚಿತ್ರದೊಳಗೆ ಸೆರೆಯಾಯಿತು.

ಯಾಣ ಮಿಸ್ಸಾಗಿದ್ದರಿಂದ ಬಹಳಷ್ಟು ಮುಖಗಳು ದಪ್ಪವಾಗಿದ್ದರಿಂದ ಅದನ್ನು ಸರಿದೂಗಿಸಲು ಬನವಾಸಿ ದರ್ಶನಕ್ಕೆ ವ್ಯವಸ್ಥೆ ಮಾಡಲಾಯಿತು. ದುರಂತವೆಂದರೆ ಎಲ್ಲಾ ಬಸ್‌ನಲ್ಲಿ ಕುಳಿತು ಹೊರಡೋಣವೆಂದರೆ ಒಂದು ಸಂಸಾರ ಕಣ್ಮರೆಯಾಗಿತ್ತು. ಅವರಿಗೆ ಬರೋಬ್ಬರಿ ಇಡೀ ಬಸ್‌ನ ಚಾರಣಿಗರು ಇಪ್ಪತ್ತು ನಿಮಿಷ ಕಾಯಬೇಕಾಯಿತು. ನಮ್ಮಿಂದ ಇನ್ನೊಬ್ಬರಿಗೆ ತೊಂದರೆಯಾಗಬಾರದೆಂಬ ಪ್ರಾಥಮಿಕ ಅರಿವಿರದ ಅವರು ಹುಸಿ ನಗುನಗುತ್ತಾ ಬಸ್ ಹತ್ತಿ ಕುಳಿತರು. ಎಲ್ಲಿ ಕಾಣೆಯಾಗಿದ್ದರೆಂದರೆ ಭಗವಂತನ ಸನ್ನಿಧಾನದಲ್ಲಿ ಸಮಾಧಾನದಿಂದ ಕುಳಿತಿದ್ದರಂತೆ!

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248